ಉ) ಕರ್ನಾಟಕ ವಿದ್ಯುತ್ ನಿಗಮದ 14 ಯೋಜನೆಗಳನ್ನು 1995ನೇ ಇಸವಿ ಹೊತ್ತಿಗೆ ಪೂರ್ಣಗೊಳಿಸಲು ಯೋಜಿಸಲಾಗಿದೆ. ಈ ಯೋಜನೆಗಳಿಂದ ವಾರ್ಷಿಕವಾಗಿ ಸುಮಾರು 3500 ದಶಲಕ್ಷ ಯೂನಿಟ್‌ಗಳ ವಿದ್ಯುಚ್ಛಕ್ತಿ ಉತ್ಪಾದಿಸಬಹುದೆಂದು ಅಂದಾಜು ಮಾಡಲಾಗಿದೆ.

ಶ್ರೀ ಶಫೀ ಅಹಮ್ಮದ್ : ತುಮಕೂರು ತಾಲ್ಲೂಕಿನ ಅಂತರಸಹಳ್ಳಿಯಲ್ಲಿ 220:66 ಕೆ ವಿ ಮತ್ತು 66:11 ಕೆ ವಿ ವಿದ್ಯುತ್ ಉಪಕೇಂದ್ರಗಳನ್ನು ಪ್ರಾರಂಭಿಸಲು ಕ್ರಮ ತೆಗೆದುಕೊಳ್ಳಲಾಗಿದೆ ಎಂದು ಹೇಳಿದ್ದೀರಿ. ತಾವು ಯಾವಾಗ ಕೆಲಸಗಳನ್ನು ಮುಗಿಸುತ್ತೀರಿ? ಹಾಗೂ ಅದಕ್ಕೆ ಹಾಕಬೇಕಾದಂತಹ ಟ್ರಾನ್ಸ್‌ಫಾರ್ಮರ್ಸ್ ಬಗ್ಗೆ ಆರ್ಡರ್ಸ್‌ಗಳನ್ನು ಕೊಟ್ಟಿದ್ದೀರಾ ಅಥವಾ ಇಲ್ಲವೇ? ಇನ್ನು ಪವರ್ ಪ್ರಾಜೆಕ್ಟ್ ಬಗ್ಗೆ ಹೇಳುತ್ತೇನೆ. ಎಲ್ಲಾ ಪವರ್ ಪ್ರಾಜೆಕ್ಟ್ ಸಹ ಅನ್ ಗೋಯಿಂಗ್ ಪ್ರಾಜೆಕ್ಟ್‌ಇದೆ. ಯಾವುದೇ ಪ್ರಾಜೆಕ್ಟ್ ಇನ್ನೂ ಕಂಪ್ಲೀಟ್ ಆಗುವ ಸ್ಟೇಜಿನಲ್ಲಿಲ್ಲ. ಈ ಪ್ರಾಜೆಕ್ಟ್‌ಗಳನ್ನು ಯಾವಾಗ ಮುಗಿಸುತ್ತೀರಿ? ಅದರಲ್ಲಿಯೂ ಸಹ ಬೆಂಗಳೂರಿನ ಯಲಹಂಕದಲ್ಲಿರುವ ಪ್ರಾಜೆಕ್ಟ್ ಕೆಲಸ ಶುರು ಮಾಡಿದ್ದೀರಾ? ಅದಕ್ಕೆ ಬೇಕಾದ ಸಲಕರಣೆಗಳ ಬಗ್ಗೆ ಆರ್ಡರ್ಸ್‌ನ್ನು ಪ್ಲೇಸ್ ಮಾಡಿದ್ದೀರೋ ಅಥವಾ ಇಲ್ಲವೋ ಇದರ ಬಗ್ಗೆ ಕೇಳುತ್ತಿದ್ದೇನೆ.

ಶ್ರೀ ಎಂ. ರಾಮಪ್ಪ : ಆದಷ್ಟು ಬೇಗ ಮಾಡುತ್ತೇವೆ.

ಸರ್ಕಾರಿ ಶಾಲೆಗಳಲ್ಲಿ ಆಂಗ್ಲ ಮಾಧ್ಯಮ ಶಿಕ್ಷಣ

3297 - ಶ್ರೀ ಕೆ. ಹರ್ಷಕುಮಾರ್‌ಗೌಡ (ಚಾಮರಾಜ) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ಕರ್ನಾಟಕ ರಾಜ್ಯದಲ್ಲಿ ಸರ್ಕಾರಿ ಒಡೆತನದ ಶಾಲೆಗಳಲ್ಲಿ ಆಂಗ್ಲ ಭಾಷಾ ಮಾಧ್ಯಮದಲ್ಲಿ ಶಿಕ್ಷಣವನ್ನು ನೀಡಲಾಗುತ್ತಿದೆಯೇ?*

ಆ) *ಸರ್ಕಾರಿ ಒಡೆತನದ ಶಾಲೆಗಳಿಗೆ ಸಮಾನಾಂತರವಾಗಿ ಖಾಸಗಿ ಸಂಸ್ಥೆಗಳಲ್ಲಿ ಆಂಗ್ಲ ಭಾಷಾ ಮಾಧ್ಯಮದ ವ್ಯಾಪಾರ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?*

ಇ) *ಗಮನಕ್ಕೆ ಬಂದಿದ್ದರೆ ಈ ಶೋಷಣೆ ಮತ್ತು ದಂದೆ ತಪ್ಪಿಸಲು ಸರ್ಕಾರ ತೆಗೆದುಕೊಂಡು ಕ್ರಮವೇನು?*

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು):

ಅ) ನೀಡಲಾಗುತ್ತಿದೆ.

ಆ) ಇಲ್ಲಾ

ಇ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಕೆ. ಹರ್ಷಕುಮಾರ ಗೌಡ : ಮಾನ್ಯ ಅಧ್ಯಕ್ಷರೇ, ಈಗ ಕರ್ನಾಟಕ ರಾಜ್ಯದಲ್ಲಿ ಸರ್ಕಾರಿ ಒಡೆತನದ ಶಾಲೆಗಳಲ್ಲಿ ಆಂಗ್ಲ ಭಾಷಾ ಮಾಧ್ಯಮದಲ್ಲಿ ಶಿಕ್ಷಣವನ್ನು ನೀಡಲಾಗುತ್ತಿದೆಯೇ ಎಂಬ ಬಗ್ಗೆ ನೀಡಲಾಗುತ್ತಿದೆ ಎಂದು ಉತ್ತರ ಹೇಳಿದ್ದಾರೆ. ರಾಜ್ಯ ಸರ್ಕಾರದ ನೀತಿಯಾದರೂ ಏನು? ರಾಜ್ಯ ಭಾಷೆ ಕನ್ನಡವನ್ನು ಕಲಿಸಬೇಕು ಎನ್ನುವುದು ಸರ್ಕಾರದ ನೀತಿ.

ಸರ್ಕಾರ ತನ್ನ ನೀತಿಗೆ ಬದ್ಧವಾಗಿದೆಯೇ? ಈ ಪ್ರಶ್ನೆಗೆ ಉತ್ತರ ಕೊಟ್ಟಿದ್ದಾರೆ.

ಅಧ್ಯಕ್ಷರು : ಪ್ರಶ್ನೆ ಕೇಳಿ.

ಶ್ರೀ ಕೆ. ಹರ್ಷಕುಮಾರ್ ಗೌಡ : ಸರ್ಕಾರೀ ಒಡೆತನದ ಶಾಲೆಗಳಲ್ಲಿ ಆಂಗ್ಲ ಭಾಷಾ ಮಾಧ್ಯಮದಲ್ಲಿ ಶಿಕ್ಷಣವನ್ನು ನೀಡಲಾಗುತ್ತಿದೆಯೇ ಎಂದು ಪ್ರಶ್ನೆ ಕೇಳಿದ್ದಕ್ಕೆ ನೀಡಲಾಗುತ್ತಿದೆ. ಎಂದು ಉತ್ತರಿಸಿದ್ದಾರೆ. ನಾನು ಮತ್ತೆ ಕೇಳುತ್ತಿದ್ದೇನೆ. ರಾಜ್ಯದ ಭಾಷೆ ಕನ್ನಡ ಎಂದು ನಾವು ಒಪ್ಪಿಕೊಂಡಿದ್ದೇವೆ. ಆ ನೀತಿಗೆ ಬದ್ಧವಾಗಿದೆಯೇ? ನನ್ನ ಒಂದು ಸ್ಪಷ್ಟವಾದ ಪ್ರಶ್ನೆ ಎಂದರೆ ಒಂದರಿಂದ ಏಳನೆಯ ತರಗತಿಯ ತನಕ ಕರ್ನಾಟಕ ರಾಜ್ಯದಲ್ಲಿ ಯಾವುದೇ ಸ್ಕೂಲ್ ಗಳಲ್ಲಿ ಕೂಡ ಇಂಗ್ಲೀಷ್ ಮಾಧ್ಯಮವನ್ನು ಕಲಿಸುತ್ತಾ ಇಲ್ಲ. ಕನಿಷ್ಟ ಒಂದೆರಡು ಸ್ಕೂಲುಗಳಲ್ಲಿ ಮಾತ್ರ ಕನ್ನಡದಲ್ಲಿ ಕಲಿಸುತ್ತಾ ಇರಬಹುದು. ಆದರೆ ಖಾಸಗೀ ಶಾಲೆಗಳಲ್ಲಿ ಇಂಗ್ಲೀಷ್ ಮಾರಾಟದ ವ್ಯವಸ್ಥೆ ನಡೆಯುತ್ತಾ ಇದೆ. ಈ ದ್ವಂದ್ವ ಏಕೆ ಬೇಕು?

ಶ್ರೀ ಜಿ. ಪುಟ್ಟಸ್ವಾಮಿಗೌಡ : (ಶಿಕ್ಷಣ ಸಚಿವರ ಪರವಾಗಿ) ನಮ್ಮ ರಾಜ್ಯದಲ್ಲಿ ಕನ್ನಡವೇ ಶಿಕ್ಷಣ ಮಾಧ್ಯಮ. ಆದರಲ್ಲಿ ಯಾವ ದ್ವಂದ್ವ ನೀತಿಯೂ ಇಲ್ಲ. ಆದರೆ ಕನ್ನಡೇತರ ವಿದ್ಯಾರ್ಥಿಗಳಿಗೆ ಅನುಕೂಲ ಆಗಲಿ ಎಂದು ಹೇಳಿ ಕೆಲವೊಂದು ಕಡೆ ಇಂಗ್ಲೀಷನ್ನು ತೆಗೆದಿರತಕ್ಕದ್ದು ನಮ್ಮಲ್ಲಿ ಇದೆ. ಆದರೆ ಖಾಸಗೀಯವರು ಇಂಗ್ಲೀಷ್ ಮಾಧ್ಯಮದ ವ್ಯಾಪಾರ ಮಾಡುತ್ತಿದ್ದಾರೆ. ಇದು ಸರ್ಕಾರದ ಗಮನಕ್ಕೆ ಬಂದಿಯೇ ಎಂದು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಅದು ಅಧಿಕೃತವಾಗಿ ಹೇಳಬೇಕಾದರೆ, ಇಲ್ಲ ಎಂದು ಹೇಳಬೇಕಾಗುತ್ತದೆ. ಆದ್ದರಿಂದ ಈ ಬಗ್ಗೆ ಸರ್ಕಾರ ಕೂಡಲೇ - ತೀರ್ಮಾನ ತೆಗೆದುಕೊಳ್ಳಲಿದೆ ಎನ್ನತಕ್ಕ ಮಾತನ್ನು ಸನ್ಮಿತ್ರರಿಗೆ ಹೇಳಬಯಸುತ್ತೇನೆ.

ಉರ್ದು ಮಾಧ್ಯಮದ ಪ್ರಾಥಮಿಕ ಪ್ರೌಢಶಾಲೆ ಮತ್ತು ಕಾಲೇಜುಗಳಿಗೆ ಅನುಮತಿ.

3294 - ಶ್ರೀ ಎ.ಎಂ. ಹಿಂಡಸಗೇರಿ (ಹುಬ್ಬಳ್ಳಿ) : ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) *1988-89 ಮತ್ತು 1989-90 ರಲ್ಲಿ ಉರ್ದು ಮಾಧ್ಯಮದ ಎಷ್ಟು ಪ್ರಾಥಮಿಕ, ಪ್ರೌಢಶಾಲೆ ಮತ್ತು ಕಾಲೇಜುಗಳಿಗೆ ಅನುಮತಿ ನೀಡಲಾಗಿದೆ? (ಜಿಲ್ಲಾವಾರು ಅಂಕಿ ಅಂಶನೀಡುವುದು)*

ಆ) *ಉರ್ದು ಮಾಧ್ಯಮದ ಪ್ರಾಥಮಿಕ, ಮಾಧ್ಯಮಿಕ, ಪ್ರೌಢಶಾಲೆ ಹಾಗೂ ಕಾಲೇಜುಗಳನ್ನು ಪ್ರಾರಂಭಿಸುವ ಬಗ್ಗೆ ಬಂದ ಅರ್ಜಿಗಳಲ್ಲಿ ಸರ್ಕಾರದಿಂದ ಇತ್ಯರ್ಥವಾಗದೆ ಉಳಿದಿರುವುದು ಎಷ್ಟು? (ಜಿಲ್ಲಾವಾರು ಅಂಕಿ ಅಂಶ ನೀಡುವುದು)*

ಶಿಕ್ಷಣ ಸಚಿವರ ಪರವಾಗಿ ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಪ್ರಾಥಮಿಕ ಶಾಲೆಗಳು - 9

ಮಾಧ್ಯಮಿಕ ಶಾಲೆಗಳು - ಇಲ್ಲ

ಪ್ರೌಢ ಶಾಲೆಗಳು - 10

ಸಂಯುಕ್ತ ಮತ್ತು ಸ್ವತಂತ್ರ ಪದವಿಪೂರ್ವ ಕಾಲೇಜುಗಳು - ಇಲ್ಲ

ಪ್ರಥಮ ದರ್ಜೆ ಕಾಲೇಜುಗಳು - ಇಲ್ಲ

(ಜಿಲ್ಲಾವಾರು ಅಂಕಿ ಅಂಶ ಪಟ್ಟಿ ಲಗತ್ತಿಸಿದೆ)

ಆ) ಉರ್ದು ಮಾಧ್ಯಮಕ್ಕೆ ಸಂಬಂಧ ಪಟ್ಟಂತೆ ಯಾವ ಅರ್ಜಿಯೂ ಬಂದಿರುವುದಿಲ್ಲ.